Akashvani : Bangalore
National Bulletins In Kannada
26.09.2025 / 7.35pm
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
26.09.2025 / 7.35pm
ಮುಖ್ಯಾಂಶಗಳು :

೧. ಬಿಎಸ್‌ಎನ್‌ಎಲ್ ದೇಶೀಯವಾಗಿ ಅಭಿವೃದ್ಧಿಪಡಿಸಿದ ೪ಜಿ ಸ್ಟ್ಯಾಕ್ ಪ್ರಧಾನಿ ನರೇಂದ್ರ ಮೋದಿ ಅವರಿಂದ ನಾಳೆ ಅನಾವರಣ

೨. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ೨೧ನೇ ಕಂತಿನ ೫೪೦ ಕೋಟಿ ರೂಪಾಯಿ ಬಿಡುಗಡೆ

೩. ವಿಶ್ವ ಆಹಾರ ಭಾರತ ಶೃಂಗಸಭೆ ಸಂದರ್ಭದಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ತಿಳಿವಳಿಕೆ ಪತ್ರಗಳಿಗೆ ಸಹಿ

೪. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ೨೦೨೪ನೇ ಸಾಲಿನ ರಾಷ್ಟ್ರೀಯ ಭೂವಿಜ್ಞಾನ ಪ್ರಶಸ್ತಿ ಪ್ರದಾನ

೫. ಏಷ್ಯಾ ಕಪ್ ಟಿ-೨೦ ಕ್ರಿಕೆಟ್- ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಇಂದು ಭಾರತ ಮತ್ತು ಶ್ರೀಲಂಕಾ ಮುಖಾಮುಖಿ

******************

ಪ್ರಧಾನಿ ನರೇಂದ್ರ ಮೋದಿ, ಭಾರತೀಯ ಸಂಚಾರ ನಿಗಮ ನಿಯಮಿತ -ಬಿಎಸ್‌ಎನ್‌ಎಲ್ ದೇಶೀಯವಾಗಿ ಅಭಿವೃದ್ಧಿಪಡಿಸಿದ ೪ಜಿ ಸ್ಟ್ಯಾಕ್ ಅನ್ನು ನಾಳೆ ಒಡಿಶಾದಲ್ಲಿ ಅನಾವರಣಗೊಳಿಸಲಿದ್ದಾರೆ. ಒಟ್ಟು ದೇಶಾದ್ಯಂತ ೯೮ ಸಾವಿರ ತಾಣಗಳಿಗೆ ೪ಜಿ ಸ್ಟ್ಯಾಕ್ ಲಭ್ಯವಾಗಲಿದೆ. ಇದರೊಂದಿಗೆ ಡಿಜಿಟಲ್ ಭಾರತ್ ನಿಧಿ ಮೂಲಕ ಶತಪ್ರತಿಶತ ೪ಜಿ ಸಂತೃಪ್ತ ಕಾರ್ಯಜಾಲಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ್ದಾರೆ. ೯೨ ಸಾವಿರದ ೬೦೦ಕ್ಕೂ ಹೆಚ್ಚು ತಾಣಗಳು ಬಿಎಸ್‌ಎನ್‌ಎಲ್ ನ ಸ್ವದೇಶಿ ೪ಜಿ ತಂತ್ರಜ್ಞಾನ ಆಧಾರದಿಂದ ನಿಯೋಜಿತಗೊಂಡಿದೆ. ಈ ಉಪಕ್ರಮ ಎರಡು ದಶಲಕ್ಷಕ್ಕೂ

ಅಧಿಕ ಹೊಸ ಚಂದದಾರರನ್ನು, ಡಿಜಿಟಲ್ ಪರಿಸರ, ವಿದ್ಯುನ್ಮಾನ-ಆಡಳಿತ, ಡಿಜಿಟಲ್ ಪಾವತಿ, ಆನ್‌ಲೈನ್ ಶಿಕ್ಷಣ ಮತ್ತು ಟೆಲಿ ಮೆಡಿಸಿನ್ ಸೇವೆಗಳ ವ್ಯಾಪ್ತಿಗೆ ತರುವ ನಿರೀಕ್ಷೆ ಇದೆ ಎಂದು ಹೇಳಿದರು. ದೇಶದ ಎಲ್ಲಾ ದೂರದ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವ ಸಿಂಧಿಯಾ ಹೇಳಿದರು.

******************

ಪ್ರಧಾನಿ ನರೇಂದ್ರ ಮೋದಿ ಅವರು, ನವದೆಹಲಿಯಲ್ಲಿಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಬಿಹಾರ್‌ನ ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಗೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬಿಹಾರ್‌ನ ೭೫ ಲಕ್ಷ ಮಹಿಳಾ ಬ್ಯಾಂಕ್ ಖಾತೆಗಳಿಗೆ ತಲಾ ೧೦ ಸಾವಿರ ರೂಪಾಯಿ ವರ್ಗಾವಣೆ ಮಾಡಿ ಮಾತನಾಡಿದ ಪ್ರಧಾನಿ ಅವರು, ಮಹಿಳೆ ಉದ್ಯೋಗ ಪಡೆದಾಗ ಅಥವಾ ಸ್ವಂತ ಉದ್ಯೋಗ ಆರಂಭಿಸಿದಾಗ ಅವರ ಕನಸುಗಳು ಗರಿ ಗೆದರುತ್ತವೆ. ಮಹಿಳಾ ಸಶಕ್ತೀಕರಣಕ್ಕಾಗಿ ಕೇಂದ್ರ ಸರ್ಕಾರ ಮುದ್ರಾ ಯೋಜನೆ, ಡ್ರೋನ್ ದೀದಿ ಆಂದೋಲನಾ, ಸಖಿ ವಿಮಾ ಆಂದೋಲನಾ ಮತ್ತು ಬ್ಯಾಂಕ್ ದೀದಿ ಆಂದೋಲನಗಳನ್ನು ಕೈಗೊಂಡಿದೆ ಎಂದು ಹೇಳಿದರು.

******************

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - 'ಸೇವಾ ಪರ್ವ'ದಲ್ಲಿಂದು, ಕೇಂದ್ರ ಸರ್ಕಾರ ಭಾರತದ ಬಾಹ್ಯಾಕಾಶ ಕ್ಷೇತ್ರವನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ದಿದೆ ಎಂಬುದರ ಕುರಿತು ಒಂದು ವರದಿ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅಡಿಯಲ್ಲಿ, ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧನೆಯ ಕಥಾನಕ ಅರಳಿದೆ. ಕನಸು ನನಸಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ರಾಷ್ಟ್ರೀಯ ಬಾಹ್ಯಕಾಶ ದಿನದಂದು ಹೇಳಿದಂತೆ ಒಂದರ ಮೇಲೆ ಮತ್ತೊಂದು ಮೈಲುಗಲ್ಲು-ಸಾಧನೆ ಮಾಡುವುದು ನಮ್ಮ ಸಹಜ ಸ್ವಭಾವವಾಗಿದೆ.

ಧ್ವನಿ : ಪ್ರಧಾನಿ ನರೇಂದ್ರ ಮೋದಿ ( ೧೯ ಸೆಕೆಂಡುಗಳು)

ಜನವರಿ ತಿಂಗಳಿನಲ್ಲಿ ಭಾರತದಿಂದ ಡಾಕಿಂಗ್ ಮತ್ತು ಅನ್ ಡಾಕಿಂಗ್ ಸಾಮರ್ಥ್ಯ ಅನಾವರಣ ಗಗನಯಾನದ ಸಾಕಾರದ ಮೊದಲ ಹೆಜ್ಜೆಯಾಗಿ ಗ್ರೂಪ್ ಕ್ಯಾಪ್ಟನ್

ಶುಬಾಂಶು ಶುಕ್ಲ ಅವರಿಂದ ಯಶಸ್ವಿ ಬಾಹ್ಯಾಕಾಶ ಯಾತ್ರೆ ಸೆಮಿಕ್ರಯೋಜನಿಕ್ ಇಂಜಿನ್, ಎಲೆಕ್ಟ್ರಿಕ್ ಪ್ರಪಲ್ಷನ್ ಮೊದಲಾದ ಅವಶ್ಯಕ ಬಾಹ್ಯಾಕಾಶ ತಂತ್ರಜ್ಞಾನಗಳಲ್ಲಿ ಪ್ರಗತಿ ಸಾಧಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ, ಬಾಹ್ಯಾಕಾಶ ಸಾಧನೆ ಮೂಲಕ ಮಾನವತೆಗಾಗಿ ತಂತ್ರಜ್ಞಾನ ಪ್ರತಿ ಮನೆ ಬಾಗಿಲಿಗೆ ತಲುಪುವುದನ್ನು ಖಚಿತಪಡಿಸುತ್ತಿದೆ. ಅದರೊಂದಿಗೆ ಅವಕಾಶ, ಘನತೆ ಮತ್ತು ಭವಿಷ್ಯದ ಭರವಸೆಯನ್ನು ಹೊಂದಿದೆ.

*****************

ಕೇಂದ್ರ ಕೃಷಿ ಸಚಿವ ಶಿವಾರಾಜ್ ಸಿಂಗ್ ಚೌಹಾಣ್ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ೨೧ನೇ ಕಂತಿನ ಹಣವನ್ನು ಇಂದು ವಿಡಿಯೊ ಕಾನ್ಫರೆನ್ಸ್ ಮೂಲಕ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ೨೭ಲಕ್ಷಕ್ಕೂ ಹೆಚ್ಚಿನ ರೈತರ ಬ್ಯಾಂಕ್ ಖಾತೆಗಳಿಗೆ ೫೪೦ಕೋಟಿ ರೂಪಾಯಿಗೂ ಅಧಿಕ ಹಣವನ್ನು ವರ್ಗಾವಣೆ ಮಾಡಲಾಗಿದೆ. ಫಲಾನುಭವಿಗಳಲ್ಲಿ ೨ ಲಕ್ಷ ೭೦ ಸಾವಿರ ಮಹಿಳೆಯರಿದ್ದಾರೆ ಎಂದು ತಿಳಿಸಿದರು.

ಧ್ವನಿ : ಶಿವರಾಜ್ ಸಿಂಗ್ ಚೌಹಾಣ್ ( ೨೬ ಸೆಕೆಂಡುಗಳು)

ನೆರೆ ಹಾಗು ಭೂ ಕುಸಿತದಿಂದ ತೀವ್ರ ಹಾನಿಗೆ ಒಳಗಾದ ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಉತ್ತರಾಖಂಡ ರಾಜ್ಯಗಳ ರೈತರಿಗೆ ಆದ್ಯತೆ ನೀಡಲಾಗಿದೆ. ಈ ಕಂತಿನ ಹಣ, ಸಂತ್ರಸ್ತ ರೈತರಿಗೆ ನೆರವಾಗಲಿದೆ ಎಂದು ಅವರು ಹೇಳಿದರು.

*****************

ವಿಶ್ವ ಆಹಾರ ಭಾರತ ಶೃಂಗಸಭೆ ಸಂದರ್ಭದಲ್ಲಿ ಒಂದು ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ತಿಳಿವಳಿಕೆ ಪತ್ರಗಳಿಗೆ ಸಹಿ ಹಾಕಲಾಗಿದೆ ಎಂದು ಆಹಾರ ಸಂಸ್ಕರಣಾ ಉದ್ದಿಮೆ ಖಾತೆ ಸಚಿವ ಚಿರಾಗ್ ಪಾಸ್ವಾನ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವುಗಳಿಂದಾಗಿ ೯ ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಯಾಗಲಿದೆ ಎಂದರು. ಆರೋಗ್ಯ ಸಂಸ್ಕರಣೆ ವಲಯ ಬೆಳೆಯಲು ಅಪಾರ ಸಾಮರ್ಥ್ಯ ಇದೆ. ಸಂಸ್ಕರಣಾ ಕ್ಷೇತ್ರದಲ್ಲಿರುವ ಅತ್ಯುತ್ತಮ ಅಭ್ಯಾಸಗಳನ್ನು ಸಾದರ ಪಡಿಸಲು ಶೃಂಗಸಭೆ ವೇದಿಕೆ ಕಲ್ಪಿಸಿದೆ ಎಂದರು. ವಿಶ್ವ ಆಹಾರ ಭಾರತ ಶೃಂಗಸಭೆಯಲ್ಲಿ ಆಹಾರ ಸಂಸ್ಕರಣೆ, ಆಹಾರ ಸುಸ್ಥಿರತೆ, ಪೋಷಕಾಂಶಯುಕ್ತ ಹಾಗೂ

ಸಾವಯವ ಆಹಾರ ಧಾನ್ಯ ಕ್ಷೇತ್ರದಲ್ಲಿ ಭಾರತದ ಸಾಧನೆಯನ್ನು ಸಾದರ ಪಡಿಸಲಾಗುತ್ತಿದೆ. ಸಮೃದ್ಧಿಗಾಗಿ ಆಹಾರ ಸಂಸ್ಕರಣೆ ವಿಷಯ ಕುರಿತಾದ ೪ ದಿನಗಳ ಈ ಶೃಂಗಸಭೆಗೆ ಪ್ರದಾನಿ ನರೇಂದ್ರ ಮೋದಿ ನಿನ್ನೆ ಚಾಲನೆ ನೀಡಿದ್ದಾರೆ.

******************

ರಾಷ್ಟ್ರಪತಿ ದ್ರೌಪದಿ ಮುರ್ಮು ನವದೆಹಲಿಯ ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ೨೦೨೪ನೇ ಸಾಲಿನ ರಾಷ್ಟ್ರೀಯ ಭೂವಿಜ್ಞಾನ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಸಮಾರಂಭದಲ್ಲಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ನಾಗರಿಕತೆಯ ಅಭಿವೃದ್ಧಿಯಲ್ಲಿ ಖನಿಜ ಲವಣಾಂಶಗಳು ಮಹತ್ವದ ಪಾತ್ರವಹಿಸಿವೆ. ಉದ್ದಿಮೆಗಳ ಬೆಳವಣಿಗೆಗೆ ಮೂಲಾಧಾರವಾಗಿದೆ. ಇದ್ದಿಲು ಮತ್ತು ಕಬ್ಬಿಣ ಇಲ್ಲದ ಕೈಗಾರೀಕರಣವನ್ನು ಊಹಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಧ್ವನಿ : ರಾಷ್ಟ್ರಪತಿ ದ್ರೌಪದಿ ಮುರ್ಮು, ( ೨೮ ಸೆಕೆಂಡುಗಳು )

ಅಪರೂಪದ ಭೂಲೋಹಗಳು ಆಧುನಿಕ ತಂತ್ರಜ್ಞಾನದ ಬೆನ್ನೆಲುಬಾಗಿವೆ. ಸ್ಮಾರ್ಟ್‌ಫೋನ್ ಮತ್ತು ವಿದ್ಯುತ್ ವಾಹನಗಳಿಂದ ಹಿಡಿದು ರಕ್ಷಣಾ ವ್ಯವಸ್ಥೆ ಮತ್ತು ಸ್ವಚ್ಛ ಇಂಧನ ಪರಿಹಾರಗಳವರೆಗೆ ಈ ಅಮೂಲ್ಯ ಲೋಹಗಳು ನೆರವಾಗಲಿವೆ ಎಂದು ರಾಷ್ಟ್ರಪತಿ ತಿಳಿಸಿದರು. ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸ್ವಾವಲಂಬಿಯಾಗುವುದು ಅತ್ಯವಶ್ಯವಕವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. ಭೂವಿಜ್ಞಾನ ಕ್ಷೇತ್ರದಲ್ಲಿ ಕೊಡುಗೆ ನೀಡಿದ ವಿಜ್ಞಾನಿಗಳ ಬದ್ಧತೆ ಹಾಗೂ ಪಾರಮ್ಯವನ್ನು ರಾಷ್ಟ್ರಪತಿ ಶ್ಲಾಘಿಸಿದರು.

******************

ಯುವಜನ ಹಾಗೂ ಕ್ರೀಡಾ ಸಚಿವಾಲಯ ಇದೇ ಮೊದಲ ಬಾರಿಗೆ ನಾಡಿದ್ದು ೨೮ರಂದು ರಾಷ್ಟ್ರೀಯ ಧ್ವಜ ರಸಪ್ರಶ್ನೆ ವಿಜೇತರಿಗೆ ವಿಶ್ವದ ಅತ್ಯುನ್ನತ ಸಮರ ಭೂಮಿ ಸಿಯಾಚಿನ್ ಭೇಟಿ ಆಯೋಜಿಸಿದೆ. ಈ ಭೇಟಿ ಸಂದರ್ಭದಲ್ಲಿ ೨೫ ಯುವಕ ಯುವತಿಯರು ಭಾರತೀಯ ಸೇನೆಯೊಂದಿಗೆ ಸುಮಾರು ೭೨ ಗಂಟೆಗಳ ಕಾಲ ನೇರ ಒಡನಾಟ ಹೊಂದಿರುವ ಅವಕಾಶ ಪಡೆದಿರುತ್ತಾರೆ. ದೇಶದ ಮುಂಚೂಣಿ ಭೂಮಿಯಲ್ಲಿ ರಾಷ್ಟ್ರ ನಿರ್ಮಾಣ, ಸ್ಥಿತಿ ಸ್ಥಾಪಕತೆ ಮತ್ತು ಮುಂದಾಳತ್ವದ ಅನುಭವ ಪಡೆಯಲಿದ್ದಾರೆ......

*****************

ದುಬೈನ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇಂದು ನಡೆಯುವ ಏಷ್ಯಾ ಕಪ್ ಟಿ-೨೦ ಕ್ರಿಕೆಟ್ ೨೦೨೫ ರ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಭಾರತ ಮತ್ತು ಶ್ರೀಲಂಕಾ ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.  ನಿನ್ನೆ ರಾತ್ರಿ ನಡೆದ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ೧೧ ರನ್‌ಗಳಿಂದ ಸೋಲಿಸುವ ಮೂಲಕ ಪಾಕಿಸ್ತಾನ ಫೈನಲ್ ಪ್ರವೇಶಿಸಿದೆ. ಈ ಗೆಲುವಿನೊಂದಿಗೆ, ಪಾಕಿಸ್ತಾನ ಇದೇ ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತವನ್ನು ಎದುರಿಸಲಿದೆ. ಗಮನಾರ್ಹವಾಗಿ, ಏಷ್ಯಾ ಕಪ್‌ನ ೧೭ ಆವೃತ್ತಿಗಳಲ್ಲಿ ಮೊದಲ ಬಾರಿಗೆ ಭಾರತ ಮತ್ತು ಪಾಕಿಸ್ತಾನ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

*****************